ಎರಡೇ ನಿಮಿಷಗಳಲ್ಲಿ ಪ್ರಿಯಂವದಾ ಬಂದರು. “ಹೊಟ್ಟೆ ತುಂಬ ಊಟ ಕೊಟ್ಟರು’ ಎಂದು ಹೇಳಿದಳು. ಏನು ಮಾಡಲಿ? ಬಕಾಸುರನ ಹೊಟ್ಟೆಯಂತೆ ಅವಳ ಹೊಟ್ಟೆ. ಎಷ್ಟು ಕೊಟ್ಟರೂ ತೃಪ್ತಿಯೇ ಇಲ್ಲ. ನಾವು ಮೂವರು ಮಾಡುವಷ್ಟು ಊಟವನ್ನು ಅವಳೊಬ್ಬಳಿಗೇ ಬಡಿಸುತ್ತೇನೆ. ಕೊನೆಗೆ ಸಾಕಾಗಿ, ‘ನನಗಿಷ್ಟೇ ಕೊಡಲು ಸಾಧ್ಯವಾಗೋದು. ಇನ್ನೂ ಹೆಚ್ಚಿಗೆ ಆಗಲ್ಲ’ ಎಂದುಬಿಟ್ಟೆ. ಅದಕ್ಕೆ ವ್ಯಂಗ್ಯವಾಗಿ ಮಾತನಾಡುತ್ತಾಳೆ. ಬಂದಾಗ ಐವತ್ತು ಕೆ.ಜಿ. ಇದ್ದವಳು ಈಗ ನೂರೈವತ್ತಾಗಿದ್ದಾಳೆ. ‘ದಪ್ಪ ಇದ್ದರೆ ಆರೋಗ್ಯವಾಗಿದ್ದಂತೆ. ಎಷ್ಟು ದಪ್ಪಗಿರುತ್ತಾರೋ… ಅಷ್ಟು ಗಟ್ಟಿಯಾಗಿರುತ್ತಾರೆ’ ಎಂಬ ನಂಬಿಕೆ ಅವಳಲ್ಲಿ ಬೇರೂರಿದೆ. ಅದನ್ನು ಕಿತ್ತು ಹಾಕಲು ಪ್ರಯತ್ನಿಸಿ ನಾನು ಸೋತು ಹೋಗಿದ್ದೇನೆ” ಎಂದರು. ನನಗೂ ಬೇಜಾರಾಯಿತು. ನಿಜ… ಮೂಢನಂಬಿಕೆಗಳು… ತಪ್ಪು ತಿಳಿವಳಿಕೆಗಳು ಆಲದ ಮರದಂತೆ ಮನದಲ್ಲಿ ಬೇರೂರಿಬಿಟ್ಟರೆ ಕೀಳಲು ಅಸಾಧ್ಯ. ಅವರೂ… ಮನಸ್ಸು ಮಾಡದೇ ಅವುಗಳ ತೂಗುಯ್ಯಾಲೆಯಲ್ಲೇ ಜೀವನವೆಲ್ಲ ಜೀಕುತ್ತಾರೆ. ಭಾರತದ ಬಹು ದೊಡ್ಡ ವಿಪರ್ಯಾಸವಿದು.

ನಿಧಾನವಾಗಿ ನಂದಿನಿಯ ಒಂದೊಂದೇ ವರಸೆಗಳು ಪ್ರಕಟವಾಗುತ್ತಾ ಹೋದವು. ಅವಳಿಗೆ ನಮ್ಮ ತಿಂಡಿಗಳಾದ ಇಡ್ಲಿ, ಉಪ್ಪಿಟ್ಟು, ಅವಲಕ್ಕಿಗಳು ಇಷ್ಟವಾಗುತ್ತಿರಲಿಲ್ಲ… ತಿನ್ನುತ್ತಿರಲಿಲ್ಲ. ಏನಿದ್ರೂ ಚಪಾತಿ… ರೋಟಿ… ಅಥವಾ ಚಾವಲ್ (ಅನ್ನ). ಅದೊಂದು ದಿನ ಅವಳಿಗೆ ಇಡ್ಲಿಯ ರುಚಿ ತೋರಿಸಬೇಕೆಂದು ನಾನು ಇಡ್ಲಿ, ಸಾಂಬಾರ್, ಚಟ್ನಿ ಕೊಟ್ಟೆ. “ಉಹ್ಲೂಂ… ಚಪಾತಿ ಅಥವಾ ಅನ್ನ ಕೊಡಿ” ಎಂದಳು. ಅನ್ನ ಇದ್ದರೂ ಅವಳಿಗೆ ಸಾಲುವಷ್ಟಿರಲಿಲ್ಲ. ಕಿರಿಕಿರಿ ಎನಿಸಿದರೂ ಮತ್ತೆ ಒಂದು ಲೋಟ ಅನ್ನ ಮಾಡಿ ಬಡಿಸಿದೆ. ದೋಸೆ ಅಭ್ಯಾಸ ಮಾಡಿಸಿದ

